೧೨೦೦ ಮಕ್ಕಳಿಗೆ ಎಷ್ಟು ಕಂಜೆಸ್ಟೆಡ್ ಇದೆ ಅಂದರೆ ಆಷ್ಟು ಕಂಜೆಸ್ಟೆಡ್ ಇದೆ, ಕ್ಲಾಸ್ ರೂಮ್ಸ್‌ಗಳು ಸಹ ಕಂಜೆಸ್ಟೆಡ್ ಆಗಿದೆ. ಬಹಳ ಲೋ ಲೆವೆಲ್‌ನಲ್ಲಿ ಆ ಹಳೆಯ ಕಟ್ಟಡವಿದೆ. ಅದು ಪುರಾತನವಾದ ಕಾಲದ್ದು. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ, ವಿದ್ಯಾ ಇಲಾಖೆಯ ಗಮನಕ್ಕೆ ಬಂದಿಲ್ಲ, ಪಿ. ಡಬ್ಲ್ಯೂ. ಡಿ ಗಮನಕ್ಕೆ ಬಂದಿಲ್ಲವೆಂದರೆ ಮಕ್ಕಳ ವಿದ್ಯಾಭ್ಯಾಸ ಬೆಂಗಳೂರು ನಗರದಲ್ಲಿ ಅದೂ ಸೆಂಟರ್ ಲೋಕೇಶನ್‌ನಲ್ಲಿ...

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಪ್ರಶ್ನೆಯಲ್ಲಿ ಕಲ್ಯಾಣಿಯಿಂದ ತೊಂದರೆ ಆಗಿದೆ ಎಂದು ಪ್ರಸ್ತಾಪ ಮಾಡಿದ್ದರೆ ಬೇರೆ ಕಲಾಪದಿಂದ ಅದಕ್ಕೆ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ಮಾನ್ಯ ಸದಸ್ಯರಿಗೆ ವಿಷಯವನ್ನು ತಿಳಿಸುವುದಕ್ಕೆ ಅನುಕೂಲವಾಗುತ್ತಿತ್ತು. ಮಾನ್ಯ ಸದಸ್ಯರು ಈ ವಿಷಯವನ್ನು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಅವರು ಏನಾ ಹುತದ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದು ಆಗದೇ ಇರುವ ಹಾಗೆ ಏನಾದರೂ ಕ್ರಮ ತೆಗೆದಂಕೊಳ್ಳುವುದಕ್ಕೆ ಸಾಧ್ಯ ಆದರೆ ಅದನ್ನು ತೆಗೆದುಕೊಳ್ಳಲಂ ಪ್ರಯತ್ನ ಮಾಡುತ್ತೇನೆ.

ಶ್ರೀ ಹರ್ಷ ಕುಮಾರ್ ಗೌಡ.—ಈಗ ಸರ್ಕಾರದ ಆಸ್ತಿ ಎಂದು ಹೇಳಿದರೆ ಅದನ್ನು ನೋಡಿ ಕೊಳ್ಳುವ ಜವಾಬ್ದಾರಿ, ಹೊಣೆಗಾರಿಕೆ ವಿದ್ಯಾ ಇಲಾಖೆಗೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಯವರು ಸ್ಪಷ್ಟಪಡಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದೇನೆ. ಇದು ಪಿ.ಡಬ್ಲ್ಯೂ.ಡಿ. ಯವರ ಕಕ್ಷೆಯಲ್ಲಿ ಬರುವುದರಿಂದ ಈ ತರಹ ಒಂದು ಪದ್ಧತಿ ಇದೆ. ಇದನ್ನು ಬದಲಾವಣೆ ಮಾಡಬೇಕು, ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎ. ಕೆ. ಅನಂತಕೃಷ್ಣ.—ಕಲ್ಯಾಣಿ ವಿಷಯವಾಗಿ ಹೇಳುವುದಾದರೆ, ಕಲ್ಚರಲ್ ಆಕ್ಟಿವಿಟೀಸ್ ಸಹ ಮಾನ್ಯ ಮಂತ್ರಿಗಳ ಕೈಯಲ್ಲಿರುವುದರಿಂದ ಈ ಕಲ್ಯಾಣಿಯನ್ನು ಒಳ್ಳೆಯ ಕಲ್ಚರಲ್ ಆಕ್ಟಿವಿಟೀಸ್‌ಗೆ ಅನುಕೂಲ ಆಗುವ ಹಾಗೆ ಬಳಸಿಕೊಳ್ಳಬೇಕು. ಈ ಒಂದು ಕಲ್ಯಾಣಿಯ ಅಭಿವೃದ್ಧಿ ಪಡಿಸುವುದಕ್ಕೆ ಸಾಕಷ್ಟು ಅವಕಾಶ ಇದೆ, ಇದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಕಲ್ಯಾಣಿಗೂ ಕಲ್ಚರಲ್ ಆಕ್ಟಿವಿಟೀಸ್‌ಗೂ ಏನು ಸಂಬಂಧವಿದೆ ?

ಶ್ರೀ ಕೆ. ಹೆಚ . ರಂಗನಾಥ್.—ಒಂದೇ ಉಸಿರಿಗೆ ಮಾನ್ಯ ಸದಸ್ಯರು ಏನೋ ಹೇಳುತ್ತಿದ್ದಾರೆ ಅಲ್ಲಿ ಕಲ್ಯಾಣಿ ಇದೆ. ಮಕ್ಕಳು ಮುಳುಗುತ್ತಿದ್ದಾರೆ, ಸಣ್ಣ ಮಕ್ಕಳಿಗೆ ತೊಂದರೆ ಆಗಿದೆ ಎಂದು ಹೇಳಿ, ತಿರುಗಿ ಅದನ್ನು ಸರಿಮಾಡಿ ಕಲ್ಚರಲ್ ಆಕ್ಟಿವಿಟೀಸ್‌ಗೆ ಉಪಯೋಗ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ ಅದು ಆಗುವುದಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ.—ನೀರು ಹರಿದು ಹೋಗುವುದಕ್ಕೆ ಅವಕಾಶ ಇರುವ ಹಾಗೆ ಏನಾದರೂ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದೇನೆ. ಆ ಕಲ್ಯಾಣಿಯನ್ನು ಸದುಪಯೋಗ ಮಾಡಿ ಎಂದು ಹೇಳುತ್ತೇನೆ. ತಾವು ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿದರೆ ಎಲ್ಲಾ ವಿಷಯ ಗೊತ್ತಾಗುತ್ತದೆ.

ಅಧ್ಯಕ್ಷರು.—ಕಲ್ಯಾಣಿಯನ್ನು ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು....

ಶ್ರೀ ಎ. ಕೆ. ಅನಂತಕೃಷ್ಣ.—ಇಲ್ಲ. ಅದನ್ನು ಮುಚ್ಚುವುದು ಬೇಡ.

ಸಂಗೀತ, ನಾಟಕ, ಸಾಹಿತ್ಯ, ಜಾನಪದ ಇತ್ಯಾದಿ ಅಕಾಡೆಮಿಗಳಿಗೆ ಸದಸ್ಯರಂಗಳ ನಾಮಕರಣ

೨೬೫. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಶಿಕ್ಷಣ, ಯುವಜನ ಸೇವಾ ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸಂಗೀತ, ನಾಟಕ, ಸಾಹಿತ್ಯ, ಜಾನಪದ ಇತ್ಯಾದಿ ಅಕಾಡೆಮಿಗಳಿಗೆ ಇದುವರೆಗೆ ಸ್ವಾಯತ್ತತೆ ಕೊಡದಿರಲು ಕಾರಣವೇನು ?

ಆ) ಈ ಅಕಾಡೆಮಿಗಳಲ್ಲಿ ಸರ್ಕಾರದ ಹಸ್ತಕ್ಷೇಪ ಇರುವುದು ನಿಜವಲ್ಲವೇ ?

ಇ) ಈ ಅಕಾಡೆಮಿಗಳಿಗೆ ಸದಸ್ಯರುಗಳ ನಾಮಕರಣಗಳನ್ನು ಮಾಡಿಕೊಳ್ಳಲು ಅವರಿಗೆ ಅಧಿಕಾರ ನೀಡಲಾಗುವುದೇ ?

ಈ) ನಾಮಕರಣಗಳನ್ನು ಮಾಡುವಲ್ಲಿ ಸರ್ಕಾರದ ಹಸ್ತಕ್ಷೇಪ ಸರಿಯೇ ?

ಶ್ರೀ ಕೆ. ಹೆಚ್. ರಂಗನಾಥ್.—(ಶಿಕ್ಷಣ, ಯುವಜನ ಸೇವೆ ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು.—

ಅ) ಅಕಾಡೆಮಿಗಳ ರಚನೆ ನಿಯಮಾವಳಿ ಪ್ರಕಾರ ಸ್ವಾಯತ್ತತೆ ಇದೆ.

ಆ) ನಿಜವಲ್ಲ.

ಇ) ೫ ಜನ ಸಹಸದಸ್ಯರನ್ನು ಕೊ-ಆಪ್ಟ್ ಮಾಡಿಕೊಳ್ಳಲು ಅಧಿಕಾರ ನೀಡಲಾಗಿದೆ.

ಈ) ಸರ್ಕಾರದ ಹಸ್ತಕ್ಷೇಪ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಸಂಗೀತ, ನಾಟಕ ಅಕಾಡೆಮಿಗಳಿಗೆ ಯಾವ ರೀತಿಯ ಸ್ವಾಯತ್ತತೆಯನ್ನು ನೀಡಿದ್ದೀರಿ. ಈ ಅಕಾಡೆಮಿಗಳಿಗೆ ಸದಸ್ಯರುಗಳನ್ನು ನೇಮಕ ಮಾಡಿಕೊಳ್ಳುವಾಗ ಆ ಅಧ್ಯಕ್ಷರುಗಳಿಗೆ ಯಾವರೀತಿಯ ಸ್ವಾತಂತ್ರವನ್ನು ತಾವು ಕೊಟ್ಟಿದ್ದೀರಿ ? ಯಾವ ರೀತಿಯಿಂದ ಈ ಅಕಾಡೆಮಿಗಳಿಗೆ ಸ್ವಾಯತ್ತತೆಯನ್ನು ಕೊಟ್ಟಿದ್ದಿರಿ ? ಅಕಾಡೆಮಿಗಳ ನಿಯಮದ ಪ್ರಕಾರ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಹೊರಗಡೆ ಹೋದರೆ ಅನೇಕ ಕವಿಗಳು, ಸಾಹಿತಿಗಳು ಸ್ವಾಯತ್ತತೆಯಲ್ಲಿ ನಮ್ಮನ್ನು ಕೇಳುವವರೇ ಇಲ್ಲವೆಂದು ಹೇಳುತ್ತಾರೆ. ಅಕಾಡೆಮಿಗಳು ತೀರಾ ಹೀನಾಯ ಸ್ಥಿತಿಯಲ್ಲಿದೆ ಎಂದು ಒತ್ತಾಯ ಬಹಳ ಇದೆ.

ಶ್ರೀ ರಮಾನಾಥ ರೈ.—ಅಕಾಡೆಮಿಯೆ ಕನ್ನಡ ಅರ್ಥ ನಮಗೆ ಬೇಕು.

ಶ್ರೀ ವಾಟಾಳ್ ನಾಗರಾಜ್.—ಅಕಾಡಮಿ ಎನ್ನುವುದು ಇಂಗ್ಲೀಷ್, ಅಕಾಡೆಮಿ ಎನ್ನುವುದು ಕನ್ನಡ.

ಶ್ರೀ ರಮಾನಾಥ ರೈ.—ಅದು ಅಲ್ಲ.

ಶ್ರೀ ವಾಟಾಳ್ ನಾಗರಾಜ್.—ನೀವು ನನ್ನ ಹತ್ತಿರ ಬನ್ನಿ, ನಾನಂ ತಮಗೆ ಕನ್ನಡ ಕಲಿಸಿ ಕೊಡುತ್ತೇನೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ತಾವು ಕನ್ನಡದಲ್ಲಿ ಪರಿಣಿತರು, ಕನ್ನಡದಲ್ಲಿ ಪರಿಣಿತಿಯನ್ನು ಪಡೆದವರು. ಅಕಾಡೆಮಿಗೆ ಕನ್ನಡದ ಶಬ್ದ ಹೇಳಿ.

ಶ್ರೀ ವಾಟಾಳ್ ನಾಗರಾಜ್.—''ಡೆ'' ಇಂಗ್ಲೀಷ್, ''ಡ'' ಎನ್ನುವುದು ಕನ್ನಡ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ತಾವು ಬೃಹಸ್ಪತಿಗಳು, ಕನ್ನಡದಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಅಕಾಡೆಮಿ ಎನ್ನುವುದು ಇಂಗ್ಲೀಷ್. ಅಕಾಡಮಿ ಎನ್ನುವುದು ಕನ್ನಡ ಪದ.

ಡಾ॥ ಜೀವರಾಜ್ ಆಳ್ವ.—ಅಕಾಡೆಮಿ ಇಂಗ್ಲೀಷ್, ಅಕಾಡೆಮಿ ಕನ್ನಡ ಎಂದು ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ್ದು ಸರಿ ಆಗಿದೆ.

ಶ್ರೀ ವಾಟಾಳ್ ನಾಗರಾಜ್.—ಈ ಅಕಾಡಮಿಗಳಿಗೆ ಸ್ವಾಯತ್ತತೆಯನ್ನು ಕೆಲವು ನಿಯಮಾವಳಿಗಳ ಪ್ರಕಾರ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈ ಅಕಾಡಮಿಗಳಲ್ಲಿ ಬಹಳ ಅನ್ಯಾಯವಾಗಿದೆ, ಈ ಅಕಾಡಮಿಗಳಿಗೆ ಸ್ವಾಯತ್ತತೆ ಕೊಟ್ಟಿಲ್ಲ ಎಂದು ಅನೇಕ ಕವಿಗಳ ಸಾಹಿತಿಗಳ ಕೂಗು ಇದ್ದೇ ಇದೆ. ಅಕಾಡಮಿಗಳಿಗೆ ನೀವು ಸ್ವಾಯತ್ತತೆ ಯಾವ ರೀತಿ ಕೊಟ್ಟಿದ್ದೀರಾ ಎನ್ನುವುದು ಒಂದು. ಅಲ್ಲಿ ಸದಸ್ಯರುಗಳನ್ನು ಯಾವ ಆಧಾರದ ನೇಮಕ ಮಾಡುತ್ತೀರಾ, ನೀವೇ ನೇಮಕ ಮಾಡುತ್ತೀರಾ ಅಥವಾ ಅಧ್ಯಕ್ಷರುಗಳಿಗೆ ನೇಮಕ ಮಾಡುವುದಕ್ಕೆ ಬಿಟ್ಟಿದ್ದೀರಾ ಮತ್ತು ಪ್ರತಿ ಅಕಾಡಮಿಗಳಿಗೆ ಯಾವ ಯಾವ ರೀತಿ ಸಣದ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ. ಹಾಗೂ ಅವರಿಗೆ ಎಲ್ಲೆಲ್ಲಿ ಕಾರ್ಯಾಲಯುಗಳನ್ನು ಕೊಟ್ಟಿದ್ದೀರಿ ? ದಯಮಾಡಿ ಇವಕ್ಕೆಲ್ಲ ಉತ್ತರ ಕೊಡಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ೧೯೭೮ರಲ್ಲಿ ಹೊರಡಿಸಿರತಕ್ಕಂಥ ಸರ್ಕಾರಿ ಆಜ್ಞೆಯೇ ಹೇಳುತ್ತೆ, ಈ ಅಕಾಡಮಿಗಳಿಗೆ ಸ್ವಾಯತ್ತತೆ ಇದೆಯೆಂದು. ಅದರಲ್ಲಿ ಕೆಲಸ ಮಾಡತಕ್ಕಂಥವರಿಗೆ ಸ್ವಾಯತ್ತತೆ ಇಲ್ಲವೆ ಅದರಲ್ಲಿ ಸದಸ್ಯರೆ ಅಲ್ಲದೆ ಇರತಕ್ಕವರಿಗೆ, ಅಲ್ಲಿ ಕೆಲಸ ಮಾಡದೇ ಇರತಕ್ಕಂಥವರಿಗೆ, ಒಳಗಡೆ ಇಲ್ಲದೆ ಇರತಕ್ಕವರಿಗೆ, ಹೊರಗಡೆ ಇರತಕ್ಕವರಿಗೆ, ಸ್ವಾಯತ್ತತೆ ಇಲ್ಲ. ಎಂದು

ಹೇಳುತ್ತಿದ್ದಾರೊ ಏನೊ ಗೊತ್ತಿಲ್ಲ, ಮಾನ್ಯ ಸದಸ್ಯರು ಇದರ ಬಗ್ಗೆ ಅವರ ಅಭಿಪ್ರಾಯ ಏನು ಏನ್ನುವುದನ್ನು ಸ್ಪಷ್ಟಪಡಿಸಬೇಕು, ಮತ್ತೆ ೫ ಜನ ಸದಸ್ಯರನ್ನು ನೇಮಕಾತಿ ಮಾಡಿಕೊಳ್ಳತಕ್ಕಂಥ ಅಧಿಕಾರ ಅವರಿಗೆ ಇದೆ. ಯಾರಿಗೆ ಎನ್ನುವುದನ್ನು ನಾನು ಉತ್ತರದಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರು, 'ಈ ಅಕಾಡಮಿಗಳಿಗೆ ಸದಸ್ಯರುಗಳ ನಾಮಕರಣಗಳನ್ನು ಮಾಡಿಕೊಳ್ಳಲು ಅವರಿಗೆ ಅಧಿಕಾರ ನೀಡಲಾಗುವುದೆ' ಎಂದು ಕೇಳಿದ್ದಾರೆ. '೫ ಜನ ಸಹ ಸದಸ್ಯರನ್ನು ಕೋಆಪ್ಟ್ ಮಾಡಿಕೊಳ್ಳಲು ಅಧಿಕಾರ ನೀಡಲಾಗಿದೆ' ಎಂದು ಹೇಳಿದ್ದೇನೆ. ಆದುದರಿಂದ ಸ್ವಾಯತ್ತತೆ ಇಲ್ಲ ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ಮಾನ್ಯ ಸದಸ್ಯರು ಯಾವ ಅರ್ಥದಲ್ಲಿ ಸ್ವಾಯತ್ತತೆ ಇಲ್ಲ ಎಂದು ಹೇಳಿದರೋ ಅವನ್ನು ಸ್ಪಷ್ಟೀಕರಿಸಿದರೆ ನಾನು ಉತ್ತರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಸಂಗೀತ ನೃತ್ಯ ಅಕಾಡಮಿಗೆ ೧೯೮೮-೮೯ಕ್ಕೆ ಏಳೂವರೆ ಲಕ್ಷ ಕೊಟ್ಟಿದಾ ರೆ. ೧೯೮೯-೯೦ಕ್ಕೆ ೮ ಲಕ್ಷ ಕೊಟ್ಟಿದ್ದರೆ, ಈ ಸಾರಿ ೭ ಲಕ್ಷದ ೭೫ ಸಾವಿರ ಇದೆ. ಕರ್ನಾಟಕ ಸಾಹಿತ್ಯ ಅಕಾಡಮಿಗೆ ೧೯೮೮-೮೯ರಲ್ಲಿ ಏಳೂವರೆ ಲಕ್ಷ, ೧೯೮೯-೯೦ರಲ್ಲಿ ೮ ಲಕ್ಷ ೧೯೯೦-೯೧ರಲ್ಲಿ ೭ ಲಕ್ಷ ೭೫ ಸಾವಿರ, ಕರ್ನಾಟಕ ಲಲಿತ ಕಲಾ ಅಕಾಡಮಿಗೆ ೧೯೮೮-೯೦ರಲ್ಲಿ ೭.೫೦ ಲಕ್ಷ. ೧೯೮೯-೯೦ರಲ್ಲಿ, ೮ ಲಕ್ಷ, ೧೯೯೦-೯೧ರಲ್ಲಿ ೭ ಲಕ್ಷದ ೭೫ ಸಾವಿರ, ಕರ್ನಾಟಕ ನಾಟಕ ಅಕಾಡಮಿಗೆ ಏಳೂವರೆ ಲಕ್ಷ ೧೯೮೯-೯೦ ರಲ್ಲಿ ೮ ಲಕ್ಷ. ೧೯೯೦-೯೧ರಲ್ಲಿ ಏಳೂಮುಕ್ಕಾಲು ಲಕ್ಷ, ಕರ್ನಾಟಕ ಉರ್ದು ಅಕಾಡಮಿಗೆ ಏಳೂವರೆ ಲಕ್ಷ, ೮ ಲಕ್ಷ, ಏಳೂಮುಕ್ಕಾಲು ಲಕ್ಷ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ, ಏಳೂವರೆ ಲಕ್ಷ, ೭ ಲಕ್ಷ. ೬ ಲಕ್ಷದ ೮೦ ಸಾವಿರ, ಈ ವರ್ಷ ಸ್ವಲ್ಪ ಕಡಿಮೆ ಆಗಿದೆ. ಮತ್ತೆ ಮಾನ್ಯ ಸದಸ್ಯರ ಹತ್ತಿರ ಏನಾದರೂ ಸಲಹೆ ಇದ್ದರೆ, ಅದನ್ನು ಹೇಳಿದರೆ ನಾನು ಗಮನದಲ್ಲಿಟ್ಟು ಕೊಂಡಿರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಕಾಡಮಿ ಅಧ್ಯಕ್ಷರುಗಳಿಗೆ ವಾಹನ ಸೌಕರ್ಯವನ್ನು ತಾವು ಕೊಟ್ಟಿದ್ದೀರಾ ? ದೊಡ್ಡ ದೊಡ್ಡ ಸಾಹಿತಿಗಳು, ಕವಿಗಳನ್ನು ತಾವು ನಾಮಕರಣ ಮಾಡಿ ಅಧ್ಯಕ್ಷರುಗಳನ್ನಾಗಿ ಮಾಡುತ್ತಾ ಇರುವಾಗ ಆ ಅಧ್ಯಕ್ಷರುಗಳಿಗೆ ವಾಹನ ಸೌಕರ್ಯವನ್ನು ನೀವು ಕೊಟ್ಟಿದ್ದೀರಾ, ಮತ್ತು ವಿಶೇಷವಾದಂಥ ಕಾರ್ಯಾಲಯಗಳನ್ನು ಇವರಿಗೆ ತಾವು ರಚನೆ ಮಾಡಿದ್ದೀರಾ ? ಮತ್ತು ಇನ್ನೂ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಸರ್ಕಾರದಲ್ಲಿ ತಾವು ಯೋಚನೆ ಮಾಡಿದ್ದೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಕಾರ್ಯಾಲಯಗಳು ಇವೆ. ವಾಹನ ಸೌಕರ್ಯ ವಗೈರೆ ವಿಚಾರಗಳಿಗೆ I want notice ತಾವು ಏನು ನನಗೆ ಪ್ರಶ್ನೆ ಕಳಿಸಿದ್ದಿರಿ ಅದರಲ್ಲಿ ಈ ಒಂದು ಸೂಚನೆ ಬರುವುದಿಲ್ಲ, ವಾಹನ ಸೌಕರ್ಯ ವಗೈರೆ ಸೂಚನೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅವರು ಬಸ್‌ನಲ್ಲಿ ಓಡಾಡುತ್ತಾ ಇದ್ದಾರೆ. ಸ್ವಾಯತ್ತತೆ ಇದೆ ಎಂದು ತಾವು ಹೇಳುತ್ತೀರಿ, ಸ್ವಾಯತ್ತತೆ ಇದೆ ಅಂದ ಮೇಲೆ ಅಧ್ಯಕ್ಷರುಗಳು ಸಮರ್ಪಕವಾಗಿ ಸ್ವತಂತ್ರವಾಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆ ಇರಬೇಕಾದರೆ ವಾಹನ ಸೌಕರ್ಯ ಏತಕ್ಕೆ ಒದಗಿಸಿಲ್ಲ ? ಇವರುಗಳು ಉನ್ನತವಾದಂಥ ಸ್ಥಾನವನ್ನು ಪಡೆದಿರತಕ್ಕಂಥವರು ಅಧ್ಯಕ್ಷರುಗಳು. ಅವರು ಸ್ವತಂತ್ರವಾಗಿ ಓಡಾಡುವುದಕ್ಕೆ ವಾಹನ ಸೌಕರ್ಯ ಮತ್ತು ಕಾರ್ಯಾಲಯದ ವ್ಯವಸ್ಥೆ ಮತ್ತು ಅವರೇ ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದೀರಾ ಹೇಗೆ ?

ಶ್ರೀ ಕೆ. ಹೆಚ್. ರಂಗನಾಥ್ ಸ್ವಾಯತ್ತತೆ ಎಂಬ ಅರ್ಥದಲ್ಲಿ ಏನು ಅನುಕೂಲಗಳನ್ನು ಒದಗಿಸಿದ್ದಾರೆ ಎನ್ನುವುದಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲ. ಅದನ್ನು ತರಿಸಿಕೊಡುತ್ತೇನೆ. ಮಾನ್ಯ ಸದಸ್ಯರು ವಾಹನ ವಗೈರೆ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಅದಿಲ್ಲದಿದ್ದರೆ ಸರ್ಕಾರ ಅದರ ಕಡೆಗೆ ಗಮನ ಕೊಡುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಅಕಾಡಮಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ದೂರುಗಳು ಸರ್ಕಾರಕ್ಕೆ ಬಂದಿವೆಯೇ ? ಬಂದಿದ್ದರೆ ಅವುಗಳು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ? ಈ ಅಧ್ಯಕ್ಷರುಗಳನ್ನು ಬದಲಾಯಿಸುವ ಪ್ರೊಪೋಸಲಂಗಳು ಸರ್ಕಾರದ ಮುಂದಿದೆಯೇ ಹೇಗೆ ?.

ಶ್ರೀ ಕೆ. ಹೆಚ್. ರಂಗನಾಥ್.—ದೂರುಗಳು ಏನು ಬಂದಿಲ್ಲ. ಇಷ್ಟು ವರ್ಷ ಎಂದು ಕಾಲ ನಿಗದಿಯಾಗಿದೆ. ಕಾಲ ಮುಗಿದ ನಂತರ ಮತ್ತೆ ಪುನರಚಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್.—ಸದ್ಯಕ್ಕೆ ಈ ಅಕಾಡಮಿಗಳಲ್ಲಿ ಯಾರು ಯಾರು ಅಧ್ಯಕ್ಷರುಗಳು ಇವ್ವಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಈ ಸಭೆಯ ವಿಯಮಾವಳಿ ಪ್ರಕಾರ ಮಾನ್ಯ ಸದಸ್ಯರಿಗೆ ಗೊತ್ತಿರುವುದನ್ನು ಕೇಳಬಾರದು.

ಶ್ರೀ ಷಫಿ ಅಹಮದ್.—ಸ್ವಾಮಿ ಉರ್ದು ಅಕಾಡಮಿಗೆ ತಾವು ೭ ಲಕ್ಷ ರೂಪಾಯಿ ಮಂಜೂರು ಮಾಡಿದ್ದೀವೆಂದು ಹೇಳಿದಿರಿ, ಕಳೆದ ಮೂರು ವರ್ಷದಿಂದ ಅದು ಡಿಫಂಕ್ಟ್ ಆಗಿದೆ. ಈಗ ಹೊಸ ಅಕಾಡಮಿ ಅನ್ನು ಏನಾದರೂ ರಚನೆ ಮಾಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಈ ತಿಂಗಳ ನಂತರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳುವ ವಿಚಾರವನ್ನು ತೀವ್ರವಾಗಿ ಗಮನಿಸಬೇಕಾಗಿದೆ. ಅಲ್ಲಿರತಕ್ಕವರು ಏನೂ ಕೆಲಸ ಮಾಡಿಲ್ಲ, ಡೀಫಂಕ್ಟಾಗಿದೆ ಎಂದು ಈ ಮನೆಯ ಸದಸ್ಯರು ಸಲಹೆ ಮಾಡುವಾಗ, ಕೆಲಸ ಮಾಡುವಂತವರನ್ನು ಅಲ್ಲಿಗೆ ಹಾಕಲಾಗುತ್ತದೆ. ಅದರಿಂದ ಅನುಕೂಲವಾಗುವಂತೆ ಕೆಲಸವನ್ನು ಮಾಡಬೇಕಾಗುತ್ತದೆ ಮತ್ತು ಸಲಹೆಗಳನ್ನು ಅವರು ನೀಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ವಾಟಾಳ್ ನಾಗರಾಜ್‌ರವರು ಅಕಾಡಮಿ ಎನ್ನುವುದಕ್ಕೆ ಕನ್ನಡದಲ್ಲಿ ಅಕಾಡಮಿ ಎಂದೂ ಹೇಳಿದರು. ಅದಕ್ಕೆ ಜೀವರಾಜ ಆಳ್ವರವರು ಅದೇ ಸರಿ ಎಂದು ಹೇಳಿದರು. ಕನ್ನಡ ಕನ್ನಡಾನೆ. ಹೊರಗಡೆ ಕೇಳುವವರೂ ಇದ್ದಾರೆ. ಅಕಾಡಮಿ ಕೂಡ ಕನ್ನಡ ಅಂತ ಅವರು ಹೇಳಿದರು, ಶಾಸನ ಸಭೆಯಲ್ಲಿ ನಾವು ಕನ್ನಡದ ಅರ್ಥ ಸ್ಪಷ್ಟವಾಗಿ ತಿಳಿದುಕೊಂಡಿಲ್ಲ ಎನ್ನುವ ಅಭಿಪ್ರಾಯಂ ಹೊರಗಿನವರಿಗೆ ಬರಬಾರದು. ಆದ್ದರಿಂದ ಡಿಕ್ಷನರಿ ಮೀನಿಂಗ್ ಪ್ರಕಾರ ಅಕಾಡಮಿ ಅಂದರೆ, ಪ್ರೌಢ ವಿದ್ಯಾಶಾಲೆ ಅಥವಾ ಪಂಡಿತ ಸಭೆ ಎಂದು ಇದೆ. ಅಕಾಡಮಿ ಎನ್ನುವುದು ಇಂಗ್ಲೀಷ್ ಪದ. ಕನ್ನಡದಲ್ಲಿ ಇದು ಪಂಡಿತ ಸಭೆ ಎಂದು ಆಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಅದಕ್ಕಿಂತ ಅಕಾಡಮಿ ಎಂದೂ ಇರುವುದೇ ಒಳ್ಳೆಯದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಪತ್ರಿಕಾ ಅಕಾಡಮಿ ಎಂದು ಇಂಗ್ಲೀಷ್‌ನಲ್ಲಿ ಇದ್ದರೆ ಕನ್ನಡದಲ್ಲಿ ಪತ್ರಿಕಾ ಅಕಾಡಮಿ ಎಂದು ಇದೆ. ಇತ್ತೀಚೆಗೆ ಪದಗಳು ಬದಲಾವಣೆಯಾಗುತ್ತಿವೆ. ಆದ್ದರಿಂದ ತಾವು ತರಿಸಿಕೊಂಡು ನೋಡಬಹುದು.

ಅಧ್ಯಕ್ಷರು—ಮಾನ್ಯ ವಾಟಾಳ್ ನಾಗರಾಜ್ ಅವರು ಅಕಾಡೆಮಿ ಎಂಬುದು ಕನ್ನಡ ಪದ ಎಂದು ಸರ್ಟಿಫೈ ಮಾಡಿದರು ಆಗಬಹುದು. ಪಂಡಿತರ ಸಭೆ ಅಂತಲೇ ಕರೆಯಿರಿ ಏನು ತಪ್ಪು ಆಗುತ್ತದೆ

ಡಾ॥ ಜೀವರಾಜ್ ಆಳ್ವ.—ಮಾನ್ಯ ಅಧ್ಯಕ್ಷರೆ. ಸ್ವಾಯತ್ತತೆ ಬಗ್ಗೆ ಬಹಳ ಮಾತುಕತೆ ನಡೆದಿದೆ. ಸ್ವಾಯತ್ತತೆಗೆ ನಿಜವಾದಂಥ ಅರ್ಥ ಬರಬೇಕಾದರೆ, ನಾವು ಹಣ ಕಾಸಿನ ಶಕ್ತಿಯನ್ನು ಆ ಸಂಸ್ಥೆಗಳಿಗೆ ಕೊಡಬೇಕಾಗುತ್ತದೆ. ಯಾವತ್ತೂ ಹಣಕಾಸಿನ ಶಕ್ತಿ ಈ ಸಂಸ್ಥೆಗಳಿಗೆ ಇರುವುದಿಲ್ಲವೋ, ಸರ್ಕಾರದ ಈ ಬಾಗಿಲಿಗೆ ಅವರು ಬೇಡಿಕೊಂಡು ಬರಬೇಕಾಗುತ್ತದೆ, ಮಂತ್ರಿಗಳನ್ನು ನೋಡಬೇಕಾಗುತ್ತದೆ. ಕಾರ್ಯದರ್ಶಿಗಳನ್ನು ನೋಡಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗ ತನ್ನ ಇತಿಮಿತಿಯಲ್ಲಿ ಬಹಳಷ್ಟು ಅಕಾಡಮಿಗಳಿಗೆ ಹೆಚ್ಚಿನ ಹಣವನ್ನು ಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಲಾಗಿತ್ತು. ನನ್ನ ಪ್ರಾಮಾಣಿಕ ಅನಿಸಿಕೆ ಏನೆಂದರೆ. ಈಗಿರುವುದನ್ನು ಶೇಕಡ ೧೦೦ ರಷ್ಟು ಹೆಚ್ಚು ಮಾಡುವಂಥ ಪ್ರಯತ್ನ ಮಾಡಬೇಕು. ಆಗ ಸ್ವಾಯತ್ತ ಸಂಸ್ಥೆಗಳಿಗೆ ಕಾರು ಗೀರು ಮುಂತಾದ ವ್ಯವಸ್ಥೆ ತಾನಾಗಿಯೇ ಬರುತ್ತದೆ. ಈ ಸಂಸ್ಥೆಗಳ ಘನತೆಯನ್ನು ನಾವು ಕಾಪಾಡಬೇಕಾಗುತ್ತದೆ. ಅದಕ್ಕಾಗಿ ಕಾರುಗಳನ್ನು ಕೊಡಬೇಕು. ೭-೮ ಲಕ್ಷ ರೂಪಾಯಿಗಳನ್ನು ಒಂದೊಂದು ಅಕಾಡಮಿಗಳಿಗೆ ಈಗ ಕೊಡುತ್ತೀರಿ. ಎಷ್ಟೆಷ್ಟೋ ಖರ್ಚಾಗುತ್ತದೆ. ಕೆಲವು ಸಾರಿ ಮಾತುಗಳು ಬರುತ್ತವೆ. "ಪ್ರೈಯಾರಿಟೀಸ್" ಎಂದು ಹೇಳುತ್ತಾರೆ. ಈ ಪ್ರೈಯಾರಿಟೀಸ್ ವಿಚಾರದಲ್ಲಿ ನಮ್ಮ ಸಂಸ್ಕೃತಿಗೆ ನಷ್ಟವಾಗಬಾರದು, ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಮತ್ತು ಮುಖ್ಯ ಮಂತ್ರಿಗಳಲ್ಲಿ ನನ್ನ ಬೇಡಿಕೆ ಇಷ್ಟೆ, ಏನು ಅನುದಾನ ಈಗ ಕೊಡುತ್ತಿದ್ದೀರಿ ಅದನ್ನು ಶೇಕಡಾ ೧೦೦ ರಷ್ಟು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಆಗ ಸ್ವಾಯತ್ತತೆಗೆ ನಿಜವಾದ ಅರ್ಥ ಬರುತ್ತದೆಂದು ತಮ್ಮ ಮೂಲಕ ಹೇಳಲು ಇಷ್ಟಪಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾಜಿ ಉಪಕುಲಪತಿಗಳಾದ ಹಾ. ಮಾ. ನಾಯಕರು ಸ್ವಾಯತ್ತತೆ ಕೊಡದಿರುವುದರಿಂದ ಬಹಳ ಅನ್ಯಾಯವಾಗಿದೆಯೆಂದು ಒತ್ತಾಯ ಮಾಡಿ ಹೇಳಿದ್ದಾರೆ. ಅದು ಕೂಡ ಸರ್ಕಾರದ ಗಮನಕ್ಕೆ ಬಂದಿರಬಹುದು.

ಶ್ರೀ ಜಿ. ರಾಜೂಗೌಡ.—ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಉನ್ನತ ಪ್ರಾಥಮಿಕ ಶಾಲೆಗಳಿಗೆ ೧೯೮೯-೯೦ರಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹುದ್ದೆಗಳು ೮೭೮ ಎಂದು ಹೇಳಿದ್ದೀರಿ. ಇದು ಏನು ನಿಜವೋ ಸುಳ್ಳೋ ಗೊತ್ತಿಲ್ಲ. ಇವರ ಪೈಕಿ ಕೆಲಸಕ್ಕೆ ಹಾಜರಾಗದೆ ಇರತಕ್ಕ ಶಿಕ್ಷಕರು ಎಷ್ಟಿದ್ದಾರೆ. ಹಾಗೂ ಖಾಲಿ ಇರಂಥ ಹುದ್ದೆಗಳಿಗೆ ಇನ್ನೂ ನೇಮಕಾತಿ ಆಗಿಲ್ಲದೆ ಇರತಕ್ಕ ಶಿಕ್ಷಕರ ಸಂಖ್ಯೆ ಎಷ್ಟು ?

ಶ್ರೀ ಕೆ. ಹೆಚ್. ರಂಗನಾಥ್.—"ಎ" ಪ್ರಶ್ನೆಗೆ ಉತ್ತರವಾಗಿ ೮೭೮ ಎಂದು ಉತ್ತರ ಕೊಟ್ಟಿದ್ದೇನೆ.

ಶ್ರೀ ಜಿ. ರಾಜೂಗೌಡ.—ಈಗ ಕೊರತೆ ಇರತಕ್ಕ ಶಿಕ್ಷಕರ ಸಂಖ್ಯೆ ಎಷ್ಟು ? ಎಂದು ನಾನು ಕೇಳುತ್ತಿದ್ದೇನೆ ;

ಶ್ರೀ ಕೆ. ಹೆಚ್. ರಂಗನಾಥ್.—ನಾನು ಉತ್ತರದಲ್ಲೇ ಹೇಳಿದ್ದೇನೆ. ೮೭೮ ಹುದ್ದೆಗಳನ್ನು ಭರ್ತಿ ಮಾಡಲು ಅಷ್ಟೇ ಪ್ರಮಾಣದ ಯೋಜನೇತರ ಹುದ್ದೆಗಳನ್ನು ಖಾಲಿ ಇಡಬೇಕೆಂದು ಷರತ್ತನ್ನು ವಿಧಿಸಲಾಗಿತ್ತು. ಈಗ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರದಲ್ಲೇ ಹೇಳಿದ್ದೇನೆ,

ಶ್ರೀ ಜಿ. ರಾಜೂಗೌಡ.—ಕೊರತೆ ಇರುವ ಹುದ್ದೆಗಳಿಗೆ ಯಾವಾಗ ಭರ್ತಿ ಮಾಡುತ್ತೀರಿ ?

ಅಧ್ಯಕ್ಷರು.—ಈಗ ರೆಕ್ರೂಟ್‌ಮೆಂಟ್ ಆಗುತ್ತದೆ. ಆ ಸಂದರ್ಭದಲ್ಲಿ ಈ ಹುದ್ದೆಗಳನ್ನು ತುಂಬುತ್ತಾರೆ.

ಶ್ರೀ ಜಿ. ರಾಜೂಗೌಡ.—ಮೈಸೂರು ಜಿಲ್ಲಾ ಪರಿಷತ್ತಿನಲ್ಲಿ ವಾರಕ್ಕೊಂದು ಸಲ ಸಂದರ್ಶನವನ್ನು ಇಟ್ಟುಕೊಂಡಿದ್ದಾರೆ. ಕೇವಲ ೫೦ ಜನರನ್ನು ಒಂದು ದಿನದಲ್ಲಿ ಸಂದರ್ಶನವನ್ನು ಮಾಡುತ್ತಾರೆ. ಈ ರೀತಿ ಮಾಡಿದರೆ ೯೦-೯೧ರಲ್ಲಿ ಶಿಕ್ಷಕರನ್ನು ನೇಮಕಾತಿ ಮಾಡಲು ಆಗುವುದಿಲ್ಲ. ಆದ್ದರಿಂದ ಅದಷ್ಟು ಬೇಗನೆ ಅಂದರೆ ೬-೧೦ ದಿವಸದಲ್ಲಿ ಎಲ್ಲಾ ಸಂದರ್ಶನವನ್ನು ಮುಗಿಸಲು ಅವರಿಗೆ ಆದೇಶವನ್ನು ನೀಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಆಂಗ್ಲ ಮಾಧ್ಯಮ ಶಾಲೆಗಳನ್ನು ನಡೆಸಲು ಅನುಮತಿ

೧೩೮೪. ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಹಮ್ಮಿಕೊಟ್ಟು ಉತ್ತರಿಸುವರೆ :—

ಅ) ರಾಜ್ಯಗಳ ಶ್ರಿಭಾಷಾ ಸೂತ್ರವನ್ನು ಜಾರಿಗೊಳಿಸಬೇಕೆಂಬುದನ್ನು ಸಂವಿಧಾನವು ರಕ್ಷಿಸಿಂತ್ತದೆ ಎಂಬುದು ವಾಸ್ತವವಲ್ಲವೇ ;

ಆ) ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳಿಗೆ ಅನುಮತಿ ನೀಡದೆಯೇ ಅಲ್ಪ ಸಂಖ್ಯಾತರ ಹಕ್ಕುಗಳಿಗೆ ಚ್ಯುತಿ ತರಲಾಗುತ್ತಿದೆ ಎಂಬುದೂ ವಾಸ್ತವವಲ್ಲವೇ ;

ಇ) ಹಾಗಿದ್ದಲ್ಲಿ, ಸರ್ಕಾರವು ಅಲ್ಪ ಸಂಖ್ಯಾತರ ಹಿತ ರಕ್ಷಣೆಗಾಗಿ ಆಂಗ್ಲ ಮಾಧ್ಯಮ ಶಾಲೆಗಳನ್ನು ನಡೆಸಲು ಅನುಮತಿ ನೀಡುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವ ವಿಚಾರವು ಪರಿಶೀಲನೆಯಲ್ಲಿದೆ ;

SRI QUAMARUL ISLAM.—I want one clarification from the Hon'ble Minister. How much time the Government will take to arrive at a decision regarding permitting English Medium Schools ?

SRI K. H. RANGANATH.—Shortly.